ಶ್ರೀ ಚಂದ್ರಶೇಖರ ಸದಾಶಿವ ನಾಯಕ್ :— ಮಾನ್ಯ ಅಧ್ಯಕ್ಷರೆ, ಅದಕ್ಕೆ ಏನು ಮಾಹಿತಿಗಳು ಬೇಕೊ ಅವನ್ನು ಈಗಾಗಲೇ ಕಳುಹಿಸಿಕೊಟ್ಟಿದ್ದಾರೆ, ಅದನ್ನು ನೋಡಿ ತಾವು ಹೆಚ್ಚಿನ ಯೋಗ್ಯ ಪರಿಹಾರ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಶರಣಬಸಪ್ಪ ದರ್ಶನಾಪುರ :— ನಾನು ಅದನ್ನು ನೋಡಿ ಆದಷ್ಟು ಬೇಗ ಅವರಿಗೆ ಪರಿಹಾರವನ್ನು ಕೊಡಿಸುವ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಸಗೀರ್ ಅಹಮದ್ :— ಅದಕ್ಕೆ ಬೇಕಾದಂತಹ ಮಾಹಿತಿ ತರಿಸಿಕೊಂಡು ಪರಿಹಾರ ಕೊಡುತ್ತೇವೆಂದು ಅವರು ಹೇಳುತ್ತಾರೆ, ಹಾಗೆ ಹೇಳಿದರೆ ಹೇಗೆ?

ಶ್ರೀ ಎಂ.ಪಿ. ಪ್ರಕಾಶ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :— ಕರ್ನಾಟಕ ಎಲೆಕ್ಟ್ರಿಕ್ ಸಿಟಿ ಬೋರ್ಡಿನವರು ಇಂಡಿಯನ್ ಎಲೆಕ್ಟ್ರಿಕ್ ಸಿಟಿ ಆಕ್ಟ್ ಕೆಳಗೆ ಅದಕ್ಕೆ ಪರಿಹಾರ ಕೊಡುತ್ತಾರೆ. ರೈತ ಸಂಜೀವಿನಿ ಎನ್ನುವುದಿರುವುದು ಎಪಿಎಂಸಿ ಆಕ್ಟ್ ಕೆಳಗೆ.

ಅಧ್ಯಕ್ಷರು :— 'ರೈತ ಸಂಜೀವಿನಿ' ಎನ್ನುವುದು ರೆಗ್ಯುಲೇಟರ್ ಮಾರ್ಕೇಟಿಗೆ ಸಂಬಂಧಿಸಿದ್ದು ಎಂದು ಮಾನ್ಯ ಪ್ರಕಾಶ್ ರವರು ಹೇಳಿದ್ದು.

ಶ್ರೀ ಎಂ.ಪಿ. ಪ್ರಕಾಶ್ :— ಈ 'ರೈತ ಸಂಜೀವಿನಿಯಲ್ಲಿ' 25 ಸಾವಿರ ರೂಪಾಯಿಗಳವರೆಗೆ ಪರಿಹಾರ ಕೊಡುತ್ತಾರೆ, ಇದಕ್ಕೂ ಅದಕ್ಕು ಸಂಬಂಧವಿಲ್ಲ.

ಶ್ರೀ ಸಗೀರ್ ಅಹಮ್ಮದ್ :— ಈಗ ಅದನ್ನು ಕೊಡುತ್ತಿಲ್ಲ; ಎಷ್ಟು ಪ್ರಕರಣಗಳಲ್ಲಿ ಆ ಪರಿಹಾರವನ್ನು ಕೊಟ್ಟಿದೆ ಎಂದು ಸರ್ಕಾರ ಹೇಳಬೇಕು.....

ಅಧ್ಯಕ್ಷರು :— ಇರಲಿ ಸ್ವಾಮಿ, ಸಮಯ ಹತ್ತಿರ ಬರುತ್ತಿದೆ ಎಲ್ಲಾ ಗೊತ್ತಾಗುತ್ತದೆ, ಮಾನ್ಯ ಸಭಾಪತಿಯವರೆ ನೀವು ಮಾತನಾಡಿ.

(ಐ) ಉಡುಪಿ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಸುಮಾರು 3 ಸಾವಿರ ಕುಟುಂಬಗಳಿಗೆ ಹಕ್ಕುಪತ್ರ ಕೊಡುವುದರ ಬಗ್ಗೆ.

ಶ್ರೀ ಯು.ಆರ್. ಸಭಾಪತಿ (ಉಡುಪಿ ಕ್ಷೇತ್ರ) :— ಸನ್ಮಾನ್ಯ ಅಧ್ಯಕ್ಷರೇ, 29ನೇ ತಾರೀಖು ಉಡುಪಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಸುಮಾರು ಮೂರು ಸಾವಿರ ಕುಟುಂಬಗಳಿಗೆ ಹಕ್ಕುಪತ್ರ ಕೊಡುವುದರ ಬಗ್ಗೆ ಇಲ್ಲಿ ನಾನು ಪ್ರಸ್ತಾಪಿಸಿದ್ದೆ, ಮಾನ್ಯ ಕಂದಾಯ ಸಚಿವರು ಎರಡು ತಿಂಗಳಗಳಲ್ಲಿ ಈ ಬಗ್ಗೆ ಒಂದು ವರದಿಯನ್ನು ಕೊಡುತ್ತೇನೆಂದು ಹೇಳಿದ್ದರು.

ಶ್ರೀ ವಿ. ಸೋಮಶೇಖರ್ (ಮಾನ್ಯ ಕಂದಾಯ ಸಚಿವರು) :— ನನ್ನಲ್ಲಿ ಉತ್ತರ ತಯಾರಿದೆ, ಅದಕ್ಕೆ ಮಧ್ಯಾಹ್ನ ನಾನು ಉತ್ತರ ಕೊಡುತ್ತೇನೆ.